## ದಶಕದ ಕಪ್ಪು ಚುಕ್ಕೆಗಳು

| | |
|---|---|
| **ಆಗಸ್ಟ್** 22, 2013: | ದಕ್ಷಿಣ ಮುಂಬೈನ ಶಕ್ತಿ ಮಿಲ್ಸ್‌ನಲ್ಲಿ 22 ವರ್ಷದ ಪತ್ರಿಕಾ ಛಾಯಾಗ್ರಾಹಕಿ ಮೇಲೆ ಒಬ್ಬ ಬಾಲಕ ಸೇರಿದಂತೆ ಐದು ಮಂದಿಯಿಂದ ಅತ್ಯಾಚಾರ. |
| **ಸೆಪ್ಟೆಂಬರ್** 3, 2013: | ದಕ್ಷಿಣ ಮುಂಬೈನ ಶಕ್ತಿ ಮಿಲ್ಸ್‌ನಲ್ಲಿ ತನ್ನ ಮೇಲೆ ಜುಲೈ 31, 2013ರಂದು ನಾಲ್ವರು ಅತ್ಯಾಚಾರವೆಸಗಿದ್ದಾರೆ ಎಂದು 18 ವರ್ಷದ ಟೆಲಿಫೋನ್ ಆಪರೇಟರ್ ದೂರು. ಪತ್ರಿಕಾ ಛಾಯಾಗ್ರಾಹಕಿ ಮೇಲೆ ಅತ್ಯಾಚಾರವೆಸಗಿದ್ದ ಪ್ರಕರಣದ ಮೂವರು ಆರೋಪಿಗಳು ಈ ಪ್ರಕರಣದಲ್ಲಿಯೂ ಭಾಗಿ. |
| **ಏಪ್ರಿಲ್** 28, 2016: | ಕೇರಳದ ಪೆರುಂಬಾವೂರ್‌ನಲ್ಲಿ ದಲಿತ ಸಮುದಾಯಕ್ಕೆ ಸೇರಿದ ಕಾನೂನು ವಿದ್ಯಾರ್ಥಿನಿ ಮೇಲೆ ವಲಸೆ ಕಾರ್ಮಿಕನೊಬ್ಬನಿಂದ ಅತ್ಯಾಚಾರ, ಹತ್ಯೆ. |
| **ಡಿಸೆಂಬರ್** 2016: | ತಮಿಳುನಾಡಿನ ಅರಿಯಾಲೂರ್‌ನಲ್ಲಿ 17 ವರ್ಷದ ದಲಿತ ಬಾಲಕಿ ಮೇಲೆ ಆಕೆಯ ಗೆಳೆಯ ಸೇರಿದಂತೆ ನಾಲ್ವರಿಂದ ಅತ್ಯಾಚಾರ, ಹತ್ಯೆ. |
| **ಜೂನ್** 4, 2017: | ಉತ್ತರ ಪ್ರದೇಶದ ಉನ್ನಾವೊದಲ್ಲಿ 17 ವರ್ಷದ ಬಾಲಕಿ ಮೇಲೆ ಬಿಜೆಪಿ ಶಾಸಕ ಕುಲ್‌ದೀಪ್ ಸಿಂಗ್ ಸೆಂಗರ್‌ನಿಂದ ಅತ್ಯಾಚಾರ. |
| **ಜನವರಿ**, 2018: | ಜಮ್ಮು–ಕಾಶ್ಮೀರದ ಕಠುವಾದಲ್ಲಿ ಬಾಲಕ ಸೇರಿದಂತೆ ಏಳು ಮಂದಿಯಿಂದ 8 ವರ್ಷದ ಮುಸ್ಲಿಂ ಬಾಲಕಿಯ ಅಪಹರಣ, ಅತ್ಯಾಚಾರ, ಹತ್ಯೆ. |
| **ನವೆಂಬರ್** 28, 2019: | ಹೈದರಾಬಾದ್‌ನ ಹೊರವಲಯದಲ್ಲಿ ಪಶುವೈದ್ಯ ವಿದ್ಯಾರ್ಥಿನಿ ಮೇಲೆ ಸಾಮೂಹಿಕ ಅತ್ಯಾಚಾರ, ಕೊಲೆ. |
| **ಸೆಪ್ಟೆಂಬರ್** 14, 2020: | ಉತ್ತರ ಪ್ರದೇಶದ ಹಾಥರಸ್‌ನಲ್ಲಿ 19 ವರ್ಷದ ದಲಿತ ಮಹಿಳೆಯ ಮೇಲೆ ಪ್ರಬಲ ಜಾತಿಯ ನಾಲ್ವರಿಂದ ಅತ್ಯಾಚಾರ, ಕೊಲೆ. |
| **ಆಗಸ್ಟ್** 21, 2021: | ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಎಂಬಿಎ ವಿದ್ಯಾರ್ಥಿನಿ ಮೇಲೆ ಬಾಲಕ ಸೇರಿದಂತೆ ಆರು ಮಂದಿಯಿಂದ ಸಾಮೂಹಿಕ ಅತ್ಯಾಚಾರ. |
| **ಆಗಸ್ಟ್** 8, 2024: | ಕೋಲ್ಕತ್ತದ ಆರ್‌ಜಿ. ಕರ್ ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ, ಕೊಲೆ. |



## ಜಾಮೀನು ನೀಡದಿರಿ...

ಅತ್ಯಾಚಾರ ಪ್ರಕರಣಗಳಲ್ಲಿ ಹೆಣ್ಣು ತನ್ನದು ತಪ್ಪಿಲ್ಲ ಎಂದು ಸಾಬೀತು ಪಡಿಸಲು ಇಲ್ಲವೇ ನ್ಯಾಯ ಪಡೆಯಲು ಕನಿಷ್ಠ 8–10 ವರ್ಷಗಳ ಕಾಲ ಹೋರಾಟ ಮಾಡಬೇಕಾದ ಸ್ಥಿತಿ ಇದೆ. ಹಾಗಾಗಿ, ಅತ್ಯಾಚಾರ ಪ್ರಕರಣ ತ್ವರಿತ ವಿಲೇವಾರಿಗಾಗಿಯೇ ಎಲ್ಲಾ ಜಿಲ್ಲೆಗಳಲ್ಲೂ ಫಾಸ್ಟ್ ಟ್ರ್ಯಾಕ್ ಕೋರ್ಟ್‌ಗಳ ಅಗತ್ಯವಿದೆ. ಆಗ ಕಾನೂನು ಪ್ರಕ್ರಿಯೆಗಳು ಬೇಗ ನಡೆದು, ತಪ್ಪಿತಸ್ಥರಿಗೆ ಶೀಘ್ರವೇ ಶಿಕ್ಷೆ ನೀಡಬಹುದು.

ಅತ್ಯಾಚಾರ ಪ್ರಕರಣಗಳಲ್ಲಿ ಆರೋಪಿಗಳಿಗೆ ಜಾಮೀನು ನೀಡಬಾರದು. ಅಂಥದೊಂದ್ದು ಕಾನೂನು ರೂಪಿಸಬೇಕಿದೆ. ಅಂತೆಯೇ, 'ವಿಶಾಖಾ ಗೈಡ್‌ಲೈನ್ಸ್' ಪ್ರಕಾರ, 10ಕ್ಕಿಂತ ಹೆಚ್ಚು ಮಹಿಳೆಯರು ಕೆಲಸ ಮಾಡುವ ಸ್ಥಳಗಳಲ್ಲಿ ಆಂತರಿಕ ಲೈಂಗಿಕ ದೂರು ಸಮಿತಿಯನ್ನು ಕಡ್ಡಾಯವಾಗಿ ರಚಿಸಬೇಕು. ಇಂಥದೊಂದು ದೂರು ಸಮಿತಿ ಇದ್ದಿದ್ದರೆ, ಕೋಲ್ಕತ್ತದ ವೈದ್ಯ ವಿದ್ಯಾರ್ಥಿನಿ ಅತ್ಯಾಚಾರ ಪ್ರಕರಣದಲ್ಲಿ ಆಕೆಯನ್ನು ರಕ್ಷಿಸಬಹುದಿತ್ತು.

**–ರೂಪಾ ಹಾಸನ**, ಹೋರಾಟಗಾರ್ತಿ

ಹೋಗುತ್ತವೆ. ಭೀಕರ ಅತ್ಯಾಚಾರ ಪ್ರಕರಣಗಳಲ್ಲಿ ನೇಣುಶಿಕ್ಷೆಯಂಥ ಕಠಿಣ ಶಿಕ್ಷೆಯಿದ್ದರೂ ಕೆಲವು ಪ್ರಕರಣಗಳಲ್ಲಿ ಅಪರಾಧಿಗಳು ಹೇಗೆ ನುಣುಚಿಕೊಳ್ಳುತ್ತಾರೆ ಎಂಬ ಪ್ರಶ್ನೆಗೆ–'ಸಂತ್ರಸ್ತೆಯ ಭವಿಷ್ಯ, ಕೋರ್ಟ್ ಮೊರೆ ಹೋದರೆ ನ್ಯಾಯಕ್ಕಾಗಿ ನಡೆಸುವ ದೀರ್ಘಕಾಲದ ಹೋರಾಟ, ಜಾತಿ–ರಾಜಕೀಯ ಪ್ರಭಾವದ ಕಾರಣಕ್ಕಾಗಿ ಪ್ರಕರಣಗಳು ವಿಚಾರಣೆಯ ಹಂತ ತಲುಪುವುದಿರಲಿ, ಕನಿಷ್ಠ ಎಫ್‌ಐಆರ್ ಕೂಡಾ ಆಗುವುದಿಲ್ಲ' ಎನ್ನುತ್ತಾರೆ ಕಾನೂನು ತಜ್ಞರು ಹಾಗೂ ಮಹಿಳಾ ಪರ ಹೋರಾಟಗಾರರು.

### ಮದುವೆ ಎಂಬ ಒಪ್ಪಂದ

ಬಹುತೇಕ ಅತ್ಯಾಚಾರ ಪ್ರಕರಣಗಳಲ್ಲಿ ಕೆಲವು ಪೊಲೀಸರು ಹಾಗೂ ಪೋಷಕರು ಅತ್ಯಾಚಾರಿಯನ್ನೇ ಮದುವೆಯಾಗಲು ಸಂತ್ರಸ್ತೆಯನ್ನು ಒತ್ತಾಯಿಸುತ್ತಾರೆ. 'ಹೇಗಿದ್ದರೂ ಜೀವನ ಹಾಳಾಗಿದೆ. ನಿನ್ನನ್ನು ಯಾರು ಮದುವೆಯಾಗುತ್ತಾರೆ? ಒಂಟಿ ಹೆಣ್ಣಿನ ಜೀವನ ಕಷ್ಟ. ಸಮಾಜ ನಿನ್ನನ್ನು ಕೆಟ್ಟ ದೃಷ್ಟಿಯಿಂದಲೇ ನೋಡುತ್ತದೆ. ಹಾಗಾಗಿ, ನೀನು ಅತ್ಯಾಚಾರಿಯನ್ನೇ ಮದುವೆಯಾಗು' ಎಂದು ಪೊಲೀಸರು ಇಲ್ಲವೇ ಸಂತ್ರಸ್ತೆ–ಅಪರಾಧಿ ಪೋಷಕರ ನಡುವೆ ಮಾತುಕತೆ



## ಹೊಸ ಕಾನೂನು ಏನು ಹೇಳುತ್ತದೆ?

ಅತ್ಯಾಚಾರ ಪ್ರಕರಣಗಳಲ್ಲಿ ಸಂತ್ರಸ್ತೆ ಹೇಳಿಕೆಯನ್ನು ಈ ಹಿಂದೆ ಪೊಲೀಸ್ ಠಾಣೆಗೆ ತೆರಳಿ ಕೊಡಬೇಕಿತ್ತು. ಹೊಸ ಕಾನೂನಿನ ಪ್ರಕಾರ ಆಕೆ ಆಡಿಯೊ–ವಿಡಿಯೊ (ಎ–ವಿ ಮೋಡ್) ಮೂಲಕ ಕೊಡಬಹುದು. ಪೊಲೀಸರು ಈ ಮಾಹಿತಿ ತೆಗೆದುಕೊಂಡು ವಿಚಾರಣೆ ನಡೆಸಬೇಕು. ಮಹಿಳಾ ಮ್ಯಾಜಿಸ್ಟ್ರೇಟರ ಮುಂದೆ ಸಂತ್ರಸ್ತೆ ಹೇಳಿಕೆ ನೀಡಬೇಕು. ಒಂದು ವೇಳೆ ಮಹಿಳೆ ಮ್ಯಾಜಿಸ್ಟ್ರೇಟ್ ಇಲ್ಲದಿದ್ದರೆ ಪುರುಷ ಮ್ಯಾಜಿಸ್ಟ್ರೇಟ್ ಮುಂದೆ ಸಂತ್ರಸ್ತೆ ತನ್ನ ಹೇಳಿಕೆ ದಾಖಲಿಸಬೇಕು.

ಸಂತ್ರಸ್ತೆಯ ವೈದ್ಯಕೀಯ ವರದಿಯನ್ನು ತನಿಖಾಧಿಕಾರಿಗೆ ಏಳು ದಿನಗಳ ಒಳಗೆ ಸಲ್ಲಿಸಬೇಕು. ಅದನ್ನು ತನಿಖಾಧಿಕಾರಿ ಮ್ಯಾಜಿಸ್ಟ್ರೇಟರಿಗೆ ಸಲ್ಲಿಸಬೇಕು. ಈ ಹಿಂದೆ ಕಾಲಮಿತಿ ಇರಲಿಲ್ಲ.

ಸಾಕ್ಷಿಗಳು ಹೇಳಿಕೆ ನೀಡುವಾಗ ಈ ಹಿಂದೆ ಠಾಣೆಗೆ ತೆರಳಿ ನೀಡಬೇಕಿತ್ತು. ಆದರೆ, ಈಗ 15 ವರ್ಷಕ್ಕಿಂತ ಕೆಳಗಿರುವ ಬಾಲಕರು ಹಾಗೂ 60 ವರ್ಷಕ್ಕಿಂತ ಮೇಲ್ಪಟ್ಟ ಪುರುಷರಿಗೆ, ಮಹಿಳೆಯಾಗಿದ್ದರೆ ಅಥವಾ ಅಂಗವಿಕಲರಾಗಿದ್ದರೆ ಅವರ ಮನೆಗೇ ತೆರಳಿ ಪೊಲೀಸರು ಸಾಕ್ಷಿಗಳಿಂದ ಹೇಳಿಕೆ ಪಡೆಯಬೇಕು.

ಈ ಹಿಂದೆ ಅತ್ಯಾಚಾರ ನಡೆದ ಸ್ಥಳದ ಪೊಲೀಸ್ ಠಾಣೆ ವ್ಯಾಪ್ತಿಯಲ್ಲೇ ದೂರು ನೀಡಬೇಕಿತ್ತು. ಆದರೆ, ಈಗ ಸಂತ್ರಸ್ತೆ ಸಮೀಪದ ಯಾವುದೇ ಠಾಣೆಯಲ್ಲೂ ಎಫ್‌ಐಆರ್ ದಾಖಲಿಸಬಹುದು. ಮೌಖಿಕವಾಗಿ, ವಾಟ್ಸ್‌ಆ್ಯಪ್, ಇ–ಮೇಲ್ ಮೂಲಕವೂ ದೂರು ನೀಡಬಹುದು. ಪೊಲೀಸರು ಈ ದಾಖಲೆಗಳನ್ನು ತೆಗೆದುಕೊಂಡು ಮೂರು ದಿನಗಳ ಒಳಗೆ ಸಂತ್ರಸ್ತೆ ಅಥವಾ ದೂರುದಾರರಿಂದ ಸಹಿ ತೆಗೆದುಕೊಳ್ಳಬೇಕು. ಎಫ್‌ಐಆರ್ ಕಾಪಿ ಈ ಹಿಂದೆ ದೂರುದಾರರಿಗೆ ಮಾತ್ರ ನೀಡಲಾಗುತ್ತಿತ್ತು. ಈಗ ಆ ಕಾಪಿಯನ್ನು ಸಂತ್ರಸ್ತೆಗೂ ಕಡ್ಡಾಯವಾಗಿ ನೀಡಬೇಕು.

**–ಅಶ್ವಿನಿ ಓಬಳೇಶ್,** ವಕೀಲೆ,
ಧ್ವನಿ ಲೀಗಲ್ ಟ್ರಸ್ಟ್